# ಸೊಳ್ಳೆಗಳು ಸಾರ್ ಸೊಳ್ಳೆಗಳು!

■ ಶ್ರೀರಂಜನಿ ಅಡಿಗ

‘ಕೇರಿಗೆ ಬಂದವಳು ನೀರಿಗೆ ಬಾರದಿರುವಳೆ’ ಎಂಬಂತೆ ಸಂಜೆಗೆ ಬಂದ ನೆಂಟ ಹಾಗೂ ಮಳೆ ಎರಡೂ ಹೋಗವು ಎಂಬಂತೆ, ಸೊಳ್ಳೆಗಳೂ ಕೂಡ ಹೋಗವು. ಮನೆಗೆ ಬರುವ ನೆಂಟರು ‘ನಿಮ್ಮ ಮನೆಯಲ್ಲಿ ವೈಫೈ ಇದೆಯೇ?’ ಎಂದು ಕೇಳುವಂತೆ ‘ನಿಮ್ಮ ಮನೆಯಲ್ಲಿ ಸೊಳ್ಳೆಗಳಿವೆಯೇ?’ ಎಂದು ಕೇಳಿದರೂ ಅಚ್ಚರಿಯಿಲ್ಲ.



ಶಾಲೆಗಳಲ್ಲಿ ನಡೆಸುತ್ತಿದ್ದ ಕ್ವಿಜ್‌ಗಳಲ್ಲಿ ಸಾಮಾನ್ಯವಾಗಿರುತ್ತಿದ್ದ, ‘ಸೊಳ್ಳೆಗಳಿಲ್ಲದ ದೇಶ ಯಾವುದು?’ ಎಂಬ ಪ್ರಶ್ನೆ ಯಾವತ್ತೂ ಕ್ರೇಜಿಯಾಗಿ ಕೇಳುತ್ತಿತ್ತು, ಹಿರಣ್ಯಕಶಪು ‘ಈ ಕಂಬದಲ್ಲಿರುವನೇ ಆ ನಿನ್ನ ಹರಿ? ಈ ಕಂಬದಲ್ಲಿರುವನೇ ಆ ನಿನ್ನ ಹರಿ?’ ಎಂದು ಅಬ್ಬರಿಸುವಾಗ ಪ್ರಹ್ಲಾದ ಮುಗ್ಧನಾಗಿ ತಂದೆಯನ್ನು ಒಲೈಸುತ್ತಾ ‘ಇಲ್ಲಿಯೂ ಇರುವನು ತಂದೆ, ಇಲ್ಲಿಯೂ ಇರುವನು ತಂದೆ’ ಎನ್ನುವಂತೆ ಸೊಳ್ಳೆಗಳು ಕೂಡ ಎಲ್ಲೆಲ್ಲೂ ಇರುವುವು ಎಂಬುದಷ್ಟೇ ಸತ್ಯ ಎಂದು ತಿಳಿದಿದ್ದ ನಮಗೆ ಈ ಪ್ರಶ್ನೆಯೇ ಯಾಕೋ ಸರಿಯಿಲ್ಲ ಎನಿಸುತ್ತಿತ್ತು. ಮಲಗಿದಾಗ ಕಿವಿಯ ಬಳಿ, ಕುಳಿತಾಗ ಕಾಲಿನ ಬಳಿ, ನಿಂತಾಗ ಮುಖ ಮೂತಿಯೆಂದು ನೋಡದೇ ಸರ್ವಾಂಗಗಳಿಗೂ ಕಚ್ಚುವಾಗ ನಿಜಕ್ಕೂ ಅವುಗಳು ಇಲ್ಲದ ಭೂಲೋಕ ಹೇಗಿರಬಹುದು ಎಂಬುದನ್ನು ಊಹಿಸಿಕೊಳ್ಳಲೂ ಅಸಾಧ್ಯವಾಗುತ್ತಿತ್ತು.

ಸೊಳ್ಳೆಗಳನ್ನು ಅವುಗಳ ದೇಹಗಾತ್ರದಿಂದ ಅಳೆದು ಕನಿಷ್ಠ ಜೀವಿ ಎಂದುಕೊಳ್ಳುವ ಹಾಗಿಲ್ಲ. ‘ಥೋ ಸೊಳ್ಳೆಗಳು ಅಥವಾ ಸೊಳ್ಳೆಗಳು ತಾನೇ?’ ಎಂದು ಸದರವಾಗಿಯೂ ಕಾಣುವಂತಿಲ್ಲ. ಅವು ಕಚ್ಚಿದ ಜಾಗವನ್ನು ಪರಪರ ಅಂತ ಕೆರಕ್ಕೊಂಡು ಗಾಯ ಆಗಿ ಅದು ಇನ್ನೇನೋ ಆಗಿ ಕಾಲನ್ನೇ ತೆಗೀಬೇಕು ಅನ್ನೋ ಪರಿಸ್ಥಿತಿ ಬಂದ್ರೂ ಬರಬಹುದು. ಅಂಥ ಖತರ್‌ನಾಕ್ ಜೀವಿಗಳು ಅವು. ಹೀಗಾಗಿ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಪಂಚತಂತ್ರದ ಕತೆಯಲ್ಲಿ

